(ಕಂದಾಯ ಇಲಾಖೆ)

# ಉಪತಹಶೀಲ್ದಾರರ ಕಾರ್ಯಾಲಯ, ಮರಿಯಮ್ಮನಹಳ್ಳಿ ಇವರ ನ್ಯಾಯಾಲಯದಲ್ಲಿ

<u>ವಾದಿ</u>
ಶ್ರೀ ಲಾಲ್ಯನಾಯ್ಕ
ತಂದೆ ದಿ|| ಟಾಕ್ರ್ಯನಾಯ್ಕ
ತಾಳೆಬಸಾಪುರ ತಾಂಡ

<u>ಪ್ರತಿವಾದಿ</u>
ಶ್ರೀ ಗೋವಿಂದನಾಯ್ಕ
ತಂದೆ ಠಾಕ್ರ ನಾಯ್ಕ,
ತಾಳೆಬಸಾಪುರ ತಾಂಡ

*******

<u>ಪೀಠಿಕೆ:-</u>

ವಾದಿಗಳಾದ ಶ್ರೀ ಲಾಲ್ಯನಾಯ್ಕ ಇವರು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿಯ ಒಂಟಿಗೋಡು ಗ್ರಾಮದ ಜಮೀನು ಸ.ನಂ.125/ಬಿ ವಿಸ್ತೀರ್ಣ 1.28, ಸ.ನಂ. 125/ಸಿ ವಿಸ್ತೀರ್ಣ 0.03, ಸ.ನಂ.125/1 ವಿಸ್ತೀರ್ಣ 1.74 ಎಕರೆ ವಾದಗ್ರಸ್ತ ಜಮೀನುಗಳು ತಮ್ಮ ತಂದೆಯವರಾದ ದಿವಂಗತ ಶ್ರೀ ಠಾಕ್ರ್ಯಾನಾಯ್ಕ ಇವರ ಹೆಸರಿನಲ್ಲಿದ್ದು, ತಮ್ಮ ತಂದೆಯವರು ದಿನಾಂಕ 12-06-1987 ಮತ್ತು ತಾಯಿ ಶ್ರೀಮತಿ ಸೋಮ್ಲಿಬಾಯಿ ಇವರು ದಿನಾಂಕ 18-12-2011 ರಂದು ಮರಣ ಹೊಂದಿರುವ ಕಾರಣ ತಮ್ಮ ಹೆಸರಿಗೆ ಪೋತಿವಾರಸು ಪ್ರಕಾರ ಹಕ್ಕುಬದಲಾಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ

ವಾದಿಯು ಸಲ್ಲಿಸಿದ ಅರ್ಜಿಯ ಮೇರೆಗೆ ಹ.ಬ.ಸಂಖ್ಯೆ ಎಂ.ಆರ್.ಹೆಚ್.8 ದಿನಾಂಕ 7-4-14 ರಲ್ಲಿ ಪ್ರಕರಣ ದಾಖಲಿಸಿಕೊಂಡು, ನಮೂನೆ-21 ರಲ್ಲಿ ಹಿತಾಸಕ್ತಾರಿಗೆ ನೋಟೀಸು ಜಾರಿಮಾಡಿ ಗ್ರಾಮಲೆಕ್ಕಾಧಿಕಾರಿಗಳು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಈ ಮೇರೆಗೆ ಪ್ರತಿವಾದಿಗಳಾದ ಶ್ರೀ ಗೋವಿಂದನಾಯ್ಕ, ತಂದೆ ಠಾಕ್ರ್ಯಾನಾಯ್ಕ ಮತ್ತು ಗ್ರಾಮದ ದೈವಸ್ಥರು ಸ.ನಂ. 125/ಐ ವಿಸ್ತೀರ್ಣ 1.74 ಎಕರೆ ಜಮೀನಿನಲ್ಲಿ ಶಾಲೆ ನಿರ್ಮಾಣವಾಗಿರುವುದರಿಂದ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಕಂದಾಯ ನಿರೀಕ್ಷಕರು ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ನೈಸರ್ಗಿಕ ನ್ಯಾಯದ ಹಿತ ದೃಷ್ಟಿಯಿಂದ ಎರಡು ಪಕ್ಷದವರಿಗೆ ಅವಕಾಶ ನೀಡಿ, ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿಲಾಯಿತು. ಪ್ರಕರಣದ ವಿಚಾರಣೆಯನ್ನು ದಿನಾಂಕ 14-07-2014 ರಂದು ಪ್ರಾರಂಭಿಸಿ, ದಿನಾಂಕ 18-07-2016 ರಂದು ಮುಕ್ತಾಯಗೊಳಿಸಲಾಯಿತು.

ವಾದಿಗಳು ವಿಚಾರಣೆಗೆ ಹಾಜರಾಗಿ ವಾದವನ್ನು ಮಂಡಿಸುತ್ತಾ, ವಿವಾದಾಸ್ಪದ ಜಮೀನು ನನ್ನ ತಂದೆಯವರ ಹೆಸರಿನಲ್ಲಿದ್ದು, ತಂದೆ ಮತ್ತು ತಾಯಿ ಇಬ್ಬರು ಮರಣ ಹೊಂದಿರುವುದರಿಂದ ಪೋತಿ ವಾರಸು ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಕೋರಿರುತ್ತಾರೆ.

2ನೇ ಪುಟಕ್ಕೆ. . . . .

ಪ್ರತಿವಾದಿಯು ಸಹ ಸದರಿ ವಿವಾದಾಸ್ಪದ ಜಮೀನು ಪಿತ್ರಾರ್ಜಿತ ಜಮೀನು ಆದ್ದರಿಂದ ಸದರಿ ಜಮೀನುಗಳನ್ನು ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ. ಮತ್ತು ಸದರಿ ಜಮೀನುಗಳ ಪೈಕಿ ಸ.ನಂ. 125/1 ವಿಸ್ತೀರ್ಣ 1.74 ಎಕರೆ ಜಮೀನಲ್ಲಿ ಈಗಾಗಲೇ ಶಾಲೆ ನಿರ್ಮಾಣವಾಗಿದ್ದು ಈ ಹಿಂದೆ ವಾದಿಯು ಸದರಿ ಜಮೀನನ್ನು ಶಾಲೆಗೆ ಬಿಟ್ಟುಕೊಡುವುದಾಗಿ ಹಣಪಡೆದಿರುವುದರಿಂದ ಸ.ನಂ. 125/1 ವಿಸ್ತೀರ್ಣ 1.74 ಎಕರೆ ಜಮೀನನ್ನು ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಊರಿನ ದೈವಸ್ಥರು ವಿಚಾರಣಾ ಸಮಯದಲ್ಲಿ ಕೋರಿರುತ್ತಾರೆ.

ವಿಚಾರಣ ಸಮಯದಲ್ಲಿ ಸಲ್ಲಿಸಿದ ವಂಶವೃಕ್ಷವನ್ನು ಪರಿಶೀಲಿಸಲಾಗಿ ಶ್ರೀ ಜೇಮ್ಲನಾಯ್ಕ ತಂದೆ ಠಾಕ್ರ್ಯಾನಾಯ್ಕ ಮತ್ತು ಪ್ರತಿವಾದಿ ಗೋವಿಂದ ನಾಯ್ಕ ತಂದೆ ಠಾಕ್ರಾನಾಯ್ಕ ಹಾಗೂ ಲಾಲ್ಯ ನಾಯ್ಕ ತಂದೆ ಟಾಕ್ರನಾಯ್ಕ ಎಂಬುವವರು ಪ್ರತ್ಯೇಕವಾಗಿ ವಂಶವೃಕ್ಷಗಳನ್ನು ಸಲ್ಲಿಸಿರುತ್ತಾರೆ. ಈ ಮೂರು ವಂಶವೃಕ್ಷಗಳಲ್ಲಿ ಪಟ್ಟಾದಾರನಾದ ಶ್ರೀ ಠಾಕ್ರ್ಯಾನಾಯ್ಕ ರವರ ಹೆಸರು ಇದ್ದು, ಇತರೆ ಸದಸ್ಯರ ಹೆಸರುಗಳು ಭಿನ್ನವಾಗಿರುತ್ತವೆ. ಈ ಕಾರಣದಿಂದಾಗಿ ಮೋತಿಯಾದ ಠಾಕ್ರ್ಯಾನಾಯ್ಕನ ಅಸಲಿ ವಾರಸುದಾರರು ಯಾರೆಂಬ ಬಗ್ಗೆ ನಿರ್ಧರಿಸುವುದು ಕಠಿಣವಾಗಿರುತ್ತದೆ. ಕಾರಣ ಈ ಪಕ್ರಣದಲ್ಲಿ ಸೂಕ್ತ ವಾರಸುದಾರರು ಯಾರೆಂಬ ಬಗ್ಗೆ ನ್ಯಾಯಾಲಯದಲ್ಲಿ ಇತ್ಯಾರ್ಥಗೊಳಿಸಿಕೊಳ್ಳಬೇಕಾಗಿರುವುದರಿಂದ ಈ ಕೆಳಕಂಡಂತೆ.

## ಆದೇಶ

ಸಂ/ಕಂ/ನಾಕಮ/ತಕರಾರು/08/2014-15 ದಿನಾಂಕ 17-10-2016

ಪ್ರಕರಣದ ವಾಸ್ತಾವಾಂಶ, ಹಿನ್ನಲೆ ಹಾಗೂ ದಾಖಲೆಗಳನ್ವಯ ವಾದಗ್ರಸ್ತ ಜಮೀನುಗಳ ಮೂಲ ಪಟ್ಟಾದಾರನಾದ ಠಾಕ್ರ್ಯಾನಾಯ್ಕ ಇವರ ಸೂಕ್ತ ವಾರಸುದಾರರ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಪರಿಹಾರ ಕಂಡುಕೊಳ್ಳಲು ವಾದಿ ಮತ್ತು ಪ್ರತಿವಾದಿಗಳಿಗೆ ನಿರ್ದೇಶನ ನೀಡುತ್ತಾ, ಪ್ರಕರಣವನ್ನು ವಿಲೇಗೊಳಿಸಲಾಗಿದೆ.

ಉಪ ತಹಶೀಲ್ದಾರರು
ನಾಡ ಕಛೇರಿ
ಉಪತಹಶೀಲ್ದಾರರು,
ನಾಡಕಛೇರಿ, ಮರಿಯಮ್ಮನಹಳ್ಳಿ

ಗೆ,

ವಾದಿ ಮತ್ತು ಪ್ರತಿವಾದಿಗಳಿಗೆ.

ಪ್ರತಿಯನ್ನು ಭೂಮಿ ಶಾಖೆ, ಹೊಸಪೇಟೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

ತಾಲೂಕು ಕಛೇರಿ, ಹೊಸಪೇಟೆ.
TALUKA OFFICE, HOSPET.
24 OCT 2016
ಕಡತ ಸಂಖ್ಯೆ:
ದಿನಾಂಕ: